ಅಂತಃಕರಣ, ಅರ್ಥ, ಮನುಷ್ಯತ್ವ? ಇಲ್ಲಿ ಮಾನವ ದುರಂತ ದುಃಖವೇ ವ್ಯಕ್ತವಾಗುವುದಿಲ್ಲ. ರೂಢಿಯ ಅರ್ಥಪಂಜರಗಳಲ್ಲಿ ಲೇಖಕರು ಬಂಧಿಯಾಗಿದ್ದಾರೆ. ಇರುವ ಅರ್ಥಗಳ ಜಾಡಿನಲ್ಲಿ ಹೊಸಕಾಲದ ಬರಹಗಾರರು ಉದಾರವಾಗಿ ಆನಂದವಾಗಿ ನಡೆಯಬಾರದು. ನಡೆದುಬಂದ ದಾರಿಯ ಪ್ರತಿಯೊಂದು ಹೆಜ್ಜೆಯೂ ತಪ್ಪುಗಳನ್ನೇ ತುಳಿದುಕೊಂಡು ಬಂದಿದೆ. ಯಾರು ಈ ರೂಢಿಗತ ಅರ್ಥದ ನಡಿಗೆಯ ಹೆಜ್ಜೆಗಳ ಅಳಿಸುತ್ತಾ ಸಾಗುವರೋ ಅವರು ಮಾತ್ರ ಪರಂಪರೆಯ ದಾರಿಗಳ ಎಷ್ಟೋ ಅಪರಾಧಗಳನ್ನು ಅಳಿಸಿ ಹೊಸ ಅರ್ಥಗಳ ಸೃಷ್ಟಿಸಬಲ್ಲರು. ಎಲ್ಲ ಒಪ್ಪಿತ ಕಟ್ಟಳೆಗಳನ್ನು ಲೇಖಕರು ಮುರಿದುಕೊಳ್ಳಬೇಕು. ಒಂದು ಬಗೆಯಲ್ಲಿ ಕಾಸ್ಮಿಕ್ ವ್ಯಕ್ತಿತ್ವವನ್ನು ಅಭಿವ್ಯಕ್ತಿಯಲ್ಲಿ ಅಳವಡಿಸಿಕೊಳ್ಳಬೇಕು. ಆ ಅರ್ಥದಲ್ಲಿ ಸೃಜನಶೀಲತೆಯು ಮಾನವ ಪಾಡಿನ ವಿರಾಟವಾದ ಹುಡುಕಾಟ. ಲೇಖಕರಾಗುವುದೆಂದರೆ, ಅಶೋಕ ಕಂಡ ಕಳಿಂಗ ಯುದ್ಧದ ದುಃಖದ ದರ್ಶನ. ಈ ತರಹದ ಧ್ಯಾನವಿಲ್ಲದೆ ಲೇಖಕರು ವೇಷ ಹಾಕಿಕೊಂಡರೆ ದಾರಿಯೇ ಕಾಣದು. ಆಗ ಭಾಷೆ, ಭಾವನೆ, ಸಂವೇದನೆ, ಅಭಿವ್ಯಕ್ತಿಗಳೆಲ್ಲ ಹದಗೆಟ್ಟು ಕುಬ್ಜವಾಗುತ್ತವೆ.



**ದುಃಖದಿಂದ ನಾನು ಸಾಹಿತ್ಯ ಸೃಷ್ಟಿಯನ್ನು ಕಲಿತಿದ್ದೇನೆ; ಪಾಠ ಪ್ರವಚನ ಗಳಿಂದಲ್ಲ.**

◆ **ನೀವು ಬಾಲ್ಯದಿಂದಲೂ ದುಃಖವನ್ನು ಕಂಡವರು, ಅಪಾರವಾದ ಸಂಕಟವನ್ನು ಅನುಭವಿಸಿದವರು. ಬರವಣಿಗೆ ಆರಂಭಿಸಿದ ದಿನಗಳಲ್ಲಿ ಲೇಖಕನಾಗದೆ ನಿಮಗೆ ಬೇರೆ ದಾರಿಯಿಲ್ಲ ಅಂತ ಅನ್ನಿಸಿತ್ತೆ? ಇಂಥ ದುಃಖ, ಸಂಕಟವನ್ನು ಬರಹದ ಲೋಕಕ್ಕೆ ತರಬೇಕು ಅಂತ ತೋಚಿತ್ತೆ?**

ಹೌದು, ನಾನು ಅನಿವಾರ್ಯವಾಗಿ ಬರಹದ ಹಾದಿಗೆ ಬಂದು ಬಿದ್ದೆ. ನನ್ನ ಬಿಡುಗಡೆ ಈ ದಾರಿಯಲ್ಲಿದೆ ಅನ್ನಿಸಿತ್ತು. ನನ್ನ ಕಿಚ್ಚು, ಸಂಕಟ, ಅಪಮಾನ, ತಬ್ಬಲಿತನ ಹಾಗು ನನ್ನಾಳದ ದುಃಖ, ಸಿಟ್ಟು, ಒಳಗೇ ಕುದಿವ ಅನಾಥಪ್ರಜ್ಞೆಯ ಒತ್ತಡಗಳನ್ನು ಬರೆಯಬೇಕು ಎಂದು ತಂತಾನೇ ಭಾವನೆಗಳು ನುಗ್ಗಿ ಬಂದು ನನ್ನನ್ನು ಸಂತೈಸುತ್ತಿದ್ದವು. ಪ್ರತಿಯೊಂದು ಬರಹವೂ ನನಗೆ ಸಂಕಟದ ಹೆರಿಗೆಯಂತಿತ್ತು. ಒಡಲ ಕಿಚ್ಚು ಭಾವದ ಕೂಸಾಗಿ ಮೂಡಿಬಂದಾಗ ಅದನ್ನು ಎಲ್ಲರೂ ಎತ್ತಿಕೊಂಡು ಆಡಿಸುತ್ತಾರೆ. ಹಾಗೆಯೇ ನನ್ನನ್ನೂ ಆರೈಕೆ ಮಾಡಿದವರ ದೊಡ್ಡದೊಂದು ಪಟ್ಟಿಯೇ ಇದೆ. ಅದರಲ್ಲಿ ಶೇಕಡಾ ತೊಂಬತ್ತರಷ್ಟು ಜನರು ಬ್ರಾಹ್ಮಣರೇ, ನನ್ನ ಬರಹಗಳ ಮೆಚ್ಚಿ ತಮ್ಮ ಬಳಿ ಕರೆದುಕೊಂಡರು. ಲಂಕೇಶರಂತೂ ಸರಿಯೇ ಸರಿ. ಯು.ಆರ್. ಅನಂತಮೂರ್ತಿ, ಜಿ.ಎಸ್. ಆಮೂರ, ಶಂಕರ ಮೊಕಾಶಿ ಪುಣೇಕರ, ಎಚ್.ಎಸ್. ರಾಘವೇಂದ್ರ ರಾವ್ ಹೀಗೆ ಅನೇಕರು. ದುಃಖದಿಂದ ನಾನು ಸಾಹಿತ್ಯ ಸೃಷ್ಟಿಯನ್ನು ಕಲಿತಿದ್ದೇನೆಯೇ ಹೊರತು ಯಾರ ಪಾಠ ಪ್ರವಚನಗಳಿಂದಲ್ಲ. ಬರಹವೇ ನನ್ನನ್ನು ಆಯ್ಕೆ ಮಾಡಿಕೊಂಡಿತ್ತೇನೋ. ನಾನೊಂದು ವಾಹಕ ಮಾತ್ರ. ಸಮುದಾಯದ ಸಮಷ್ಟಿ ದುಃಖವೇ ನನ್ನಿಂದ ಹಲವು ಸ್ವರಗಳ ಕೊಳಲು ನಾದವ ನುಡಿಸಿದೆ.

◆ **ಸಮುದಾಯದ ಸಮಷ್ಟಿ ದುಃಖ ಈಗಾಗಲೇ ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಸೇರಿದಂತೆ ಅನೇಕರಲ್ಲಿ ದಟ್ಟವಾಗಿಯೇ ಬಂದಿತ್ತು. ಇದನ್ನೂ ಮೀರಿ ಸಾಹಿತ್ಯ ರಚನೆಯ 'ಪ್ರಾಣತತ್ವ' ಅಂತ ನೀವು ಯಾವುದನ್ನು ಕಂಡುಕೊಂಡಿರಿ?**

ಇಹದ ಈ ಎಲ್ಲಾ ವಿಕೃತಿಗಳಿಂದ ವಿಮೋಚನೆಗೊಳ್ಳುವುದೇ ಸಾಹಿತ್ಯದ ಪ್ರಾಣತತ್ವ. ಸಾಹಿತ್ಯ ಒಂದು ಗೋಳಲ್ಲ, ರಗಳೆ ಅಲ್ಲ, ವಿಲಾಸ ಅಲ್ಲ, ಸರಸ ಅಲ್ಲ. ಅದು ಮನುಷ್ಯತ್ವದ ಹುಡುಕಾಟ, ಅದೇ ಪ್ರಾಣ. ಆ ಪ್ರಾಣಕ್ಕೆ ಜೀವವಿಕಾಸದ ಹಾದಿಯಲ್ಲಿ ಬದುಕಿ ಉಳಿಯುವ ಸವಾಲುಗಳು ಎದುರಾದವು. ಯುದ್ಧಗಳ, ಸಾಮ್ರಾಜ್ಯಗಳ ಅಹಂಕಾರದಲ್ಲಿ ಮನುಷ್ಯರ